ಶ್ರೀ ಎಸ್ ಎಂ ಕೃಷ್ಣ ಮಾನ್ಯ ಅಧ್ಯಕ್ಷರೇ, ಇಲ್ಲಿನ ಸಮಸ್ಯೆ ಕೂಡ ನಾನು ಚಾಮರಾಜನಗರದ ಕುಡಿಯುವ ನೀರಿನ ವ್ಯವಸ್ಥೆಗೆ ಉತ್ತರ ಕೊಡತಕ್ಕಂಥ ಕಾಲದಲ್ಲಿ ನಗರಾಭಿವೃದ್ಧಿ ಇಲಾಖೆ ಮತ್ತು ಆರ್‌ಡಿಪಿಆರ್ ಇಲಾಖೆ ಇವರುಗಳಲ್ಲಿ ಒಂದು ರೀತಿಯ ಸಮನ್ವಯ ಅಭಾವದ ಕಾರಣ ಪತ್ರ ವ್ಯವಹಾರದ ಮೂಲಕ ಇಂತಹ ಅಗತ್ಯವಾಗಿರತಕ್ಕಂಥ ಕುಡಿಯುವ ನೀರಿನ ಸರಬರಾಜಿನ ಯೋಜನೆಗಳು ನಿಧಾನವಾಗುತ್ತಾ ಇರತಕ್ಕಂಥಾದ್ದು ಸರ್ಕಾರದ ಗಮನಕ್ಕೆ ಬಂದಿದೆ ಆದ್ದರಿಂದ ಡೆವಲಪ್‌ಮೆಂಟ್ ಕಮೀಷನರ್ ಅನ್ನು ಮೇಲ್ವಿಚಾರಕರನ್ನಾಗಿ ಮಾಡಿ ಈ ಆರ್ ಡಿ ಪಿ ಆರ್ ಮತ್ತು ಅರ್ಬನ್ ವಾಟರ್ ಬೋರ್ಡ್ ಈ ಎರಡೂ ಇಲಾಖೆಗಳಲ್ಲಿ ನಾವು ಸಮನ್ವಯವನ್ನು ತರುವುದರ ಮೂಲಕ ಇಂತಹ ಯೋಜನೆಗಳು ಶೀಘ್ರವಾಗಿ ಕಾರ್ಯರೂಪಕ್ಕೆ ಬರಬೇಕಾದಂತಹ ಔಚಿತ್ಯವನ್ನು ನಾವು ಮನಗಂಡಿದ್ದೇವೆ, ಇಲ್ಲಿ ನಾಲ್ಕು ಹಳ್ಳಿಗಳು ಒಂದಿವೆ ಸೋಮವಾರವೇಟೆಗೆ ನಾವು ಹಾರಂಗಿಯಿಂದ ಏನು ನೀರು ತರಬೇಕೆಂದು ತೀರ್ಮಾನ ಮಾಡಿದ್ದೇವೆ ಆ ನೀರು ಸೋಮವಾರವೇಟೆಗೆ ಬರತಕ್ಕಂಥ ಕಾಲದಲ್ಲಿ ನಾಲ್ಕು ಹಳ್ಳಿಗಳು ಏನು ಇವ ಅವರಿಗೂ ನೀರು ಕೊಡಬೇಕು ಎನ್ನತಕ್ಕಂಥಾದ್ದು ಈ ಯೋಜನೆಯ ಪೂರ್ಣ ವಿವರ, ಈ ಯೋಜನೆಯ ವಿನ್ಯಾಸವನ್ನು ತಯಾರು ಮಾಡಿದ್ದೇವೆ ನಾನು ಡೆವಲಪ್‌ಮೆಂಟ್ ಕಮೀಷನರ್‌ಗೆ ಹೇಳಿ ಆದಷ್ಟು ಬೇಗ ಈ ಹೊಂದಾಣಿಕೆ ಸಾಧಿಸಿ ಸೋಮವಾರವೇಟೆಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಚಾಲ್ತಿಗೊಳಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ

ಶ್ರೀ ಎಂ ಪಿ ಅವ್ವಚ್ಚುರಂಜನ್ ಮಾನ್ಯ ಅಧ್ಯಕ್ಷರೇ ಈ ಸಲದ ಬಜೆಟ್‌ನಲ್ಲಿ ನೇರಿಸಿದರೆ ಬಹಳ ಉತ್ತಮವಾಗುತ್ತಿತ್ತು ನಾವು ಇಡೀ ಬೆಂಗಳೂರಿಗೆ ಕುಡಿಯುವ ನೀರನ್ನು ಕೊಡಗಿನಿಂದ ಕೊಡುತ್ತಿದ್ದೇವೆ

ಶ್ರೀ ಎಸ್ ಎಂ ಕೃಷ್ಣ ಮಾನ್ಯ ಅಧ್ಯಕ್ಷರೇ, ಇವೆಲ್ಲಾ ಬಜೆಟ್‌ನಲ್ಲಿ ಬರುವುದಿಲ್ಲ ಏಕೆಂದರೆ ಇವು ಅರ್ಬನ್ ಡೆವಲಪ್‌ಮೆಂಟ್ ವಾಟರ್ ಬೋರ್ಡ್ ಮೂಲಕ ಮಾಡತಕ್ಕಂಥ ಯೋಜನೆಗಳಾದುದರಿಂದ ಬಜೆಟ್‌ಗೆ ಬಾರದಿದ್ದರೂ ಕೂಡ ಸೋಮವಾರವೇಟೆಗೆ ನೀರು ಕೊಡತಕ್ಕಂಥ ನಮ್ಮ ಉದ್ದೇಶ ಏನು ಇದೆ ಆ ಉದ್ದೇಶವನ್ನು ಈಡೇರಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ

ಶ್ರೀ ಎಂ ಪಿ ಅವ್ವಚ್ಚುರಂಜನ್ ಮಾನ್ಯ ಅಧ್ಯಕ್ಷರೇ ಈ ವರ್ಷವೇ ಮಾಡಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನ

ಬಜಾವುರ ಜಿಲ್ಲೆಯಲ್ಲಿ ಜಲಸಂವರ್ಧನ ಯೋಜನೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 8(417)

**ಸದಸ್ಯರ ಹೆಸರು ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ(ತಿಕೋಟ)**

**ಉತ್ತರಿಸುವ ಸಚಿವರು ಶ್ರೀ ಎಸ್ ಎಂ ಕೃಷ್ಣ(ಮುಖ್ಯಮಂತ್ರಿಗಳು)**

## ಪ್ರಶ್ನೆ

ಅ) ರಾಜ್ಯದಲ್ಲಿ ಜಲಸಂವರ್ಧನೆ ಯೋಜನೆಯನ್ನು ಜಾರಿಗೊಳಿಸಲಾಗಿದೆಯೇ ಜಾರಿಯಲ್ಲಿದ್ದರೆ ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ?

ಆ) ಈ ಯೋಜನೆಗಳನ್ನು ಅನುಷ್ಠಾನಗೊಳಿಸಲು ಮಂಜೂರಾದ ಅನುದಾನ ಎಷ್ಟು?

ಇ) ಜಲಸಂವರ್ಧನೆ ಯೋಜನೆಯು ಬಿಜಾಪುರ ಜಿಲ್ಲೆಗೂ ಅನ್ವಯಿಸುವುದೇ, ಹಾಗಿದ್ದರೆ ಜಿಲ್ಲೆಯಲ್ಲಿನ ಯಾವ ಯಾವ ಕೆರಗಳನ್ನು ಈ ಯೋಜನೆಯಡಿ ಹೂಳತ್ತಲು ಆಯ್ಕೆ ಮಾಡಲಾಗಿದೆ?

ಈ) ರಾಜ್ಯದ ಪ್ರತಿಯೊಂದು ಕೆರೆಗೆ ಹೂಳೆತ್ತುವ ನಲುವಾಗಿ ತಗಲುವ ಅಂದಾಜು ವೆಚ್ಚ ಎಷ್ಟು, ಈ ವೆಚ್ಚವನ್ನು ಭರಿಸಲು ಬಳಸಿಕೊಳ್ಳುವ ಮೂಲಗಳಾವುವು, ಪ್ರತಿಯೊಂದು ಮೂಲದ ಪಾಲು ಎಷ್ಟೆಷ್ಟು?

ಉ) ಈಗಾಗಲೇ ಈ ಯೋಜನೆಯಲ್ಲಿ ರಾಜ್ಯ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಸಾಧಿಸಲಾದ ಪ್ರಗತಿ ಯಾವ ಹಂತದಲ್ಲಿದೆ?

## ಉತ್ತರ

ಅ) ಇನ್ನೂ ಜಾರಿಗೊಳಿಸಿರುವುದಿಲ್ಲ

ಆ) ಉದ್ಭವಿಸುವುದಿಲ್ಲ

ಇ) ಯೋಜನೆಯನ್ವಯವಾಗುವ ಜಿಲ್ಲಾವಾರು ಪಟ್ಟಿಯಲ್ಲಿ ಬಿಜಾಪುರ ಜಿಲ್ಲೆ ಸೇರ್ಪಡೆಯಾಗಿರುವುದಿಲ್ಲ ವಿಶ್ವಬ್ಯಾಂಕಿನವರ ಅನುಮೋದನೆಯ ನಂತರ ಕೃಷಿ ಭೌಗೋಳಿಕ ವಲಯ ಮತ್ತು ಮಾರ್ಗಸೂಚಿಗಳ ಆಧಾರದ ಮೇಲೆ ಜಿಲ್ಲೆಗಳನ್ನು ಗುರುತಿಸಲಾಗುವುದು

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ

ಶ್ರೀ ವಾಟೀಲ್ ಶಿವಾನಂದ ಸಿದ್ದರಾಮಗೌಡ ಮಾನ್ಯ ಅಧ್ಯಕ್ಷರೇ, ವಿಶ್ವಬ್ಯಾಂಕಿನ ಸಹಾಯದೊಂದಿಗೆ ಎರಡು ಸಾವಿರ ಇಸವಿಯಲ್ಲಿ ಈ ಯೋಜನೆಯನ್ನು ಪ್ರಾರಂಭ ಮಾಡುತ್ತೇವೆಂದು ಘೋಷಣೆ ಮಾಡಿದ್ದರು 2001ನೇ ಇಸವಿಯಲ್ಲಿ ಮಾನ್ಯ ಬೃಹತ್ ನೀರಾವರಿ ಸಚಿವರು ಹೇಳಿದರು, ಗಾಂಧೀ ಜಯಂತಿ ಉತ್ಸವದ ದಿನದಿಂದ ಈ ಯೋಜನೆ ಪ್ರಾರಂಭವಾಗಿದೆ ಮತ್ತು ಮಾನ್ಯ ಮುಖ್ಯಮಂತ್ರಿಗಳು ಈ ಯೋಜನೆಗೆ ಈಗಾಗಲೇ ಹಣ ಬಿಡುಗಡೆ ಮಾಡಿದ್ದಾರೆ ಎಂದು ಆದರ ಇವತ್ತು ನನಗೆ ಇನ್ನೂ ಈ ಯೋಜನೆ ಜಾರಿಗೊಳಿಸಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ ಅಂದರೆ ವಿಶ್ವಬ್ಯಾಂಕಿನಿಂದ ಇನ್ನೂ ಇವರಿಗೆ ಹಣ ಎಂದಿಲ್ಲ ಎಂದು ನನಗೆ ತಿಳಿದ ಮಟ್ಟಿಗೆ ವಿಶ್ವಬ್ಯಾಂಕಿನಿಂದ ಇನ್ನೂ ಹಣಬಿಡುಗಡೆ ಮಾಡಿಲ್ಲ ಮತ್ತು ಸರ್ಕಾರದಿಂದ ಅವರಿಗೂ ಇನ್ನೂ ಪ್ರಸ್ತಾವವೇ ಹೋಗಿಲ್ಲ ಇದಕ್ಕೆ ಕಾರಣ ವಿಶ್ವಬ್ಯಾಂಕಿನಿಂದ ಏನು ಹಣ ಬಿಡುಗಡೆ ಆಗುತ್ತದೆ ಅದು ರಾಜ್ಯದಲ್ಲಿ ಸರಿಯಾಗಿ ಸದ್ಬಿನಿಯೋಗ ಆಗಲಿಲ್ಲ ಎನ್ನತಕ್ಕಂಥ ಎಂದು ಸಂಶಯವನ್ನು ಅವರು ವ್ಯಕ್ತಪಡಿಸಿದ್ದಾರೆ ಎಂದು ತಿಳಿದು ಬಂದಿದೆ ಈ ಹಿನ್ನೆಲೆಯಲ್ಲಿ 1986-87ನೇ ಸಾಲಿನಲ್ಲಿ ವಿಶ್ವಬ್ಯಾಂಕಿನಿಂದ ಹಣ ತೆಗೆದುಕೊಂಡಿದ್ದಾರೆ ಅಂದರೆ 120 ಹೊಸ ಕೆರೆಗಳನ್ನು ಕಟ್ಟುವ ನೆಲೆಯಾಗಿ ಆ ಬಗ್ಗೆ ಇದುವರೆಗೂ ವಿಶ್ವಬ್ಯಾಂಕಿನವರಿಗೆ ಮಾಹಿತಿ ಕೊಟ್ಟಿಲ್ಲ ಆ 120 ಹೊಸ ಕೆರೆಗಳನ್ನು ಕಟ್ಟಿದ್ದೇವೆ ಎನ್ನತಕ್ಕಂಥ ಮಾಹಿತಿ ಅವರಿಗೆ ಸಿಕ್ಕಿಲ್ಲ ಆ ಕಾರಣಕ್ಕಾಗಿ ಈ ಹಣವನ್ನು ಇದುವರೆಗೆ ವಿಶ್ವಬ್ಯಾಂಕ್‌ನವರು ಸರ್ಕಾರಕ್ಕೆ ಬಿಡುಗಡೆ ಮಾಡಿಲ್ಲವೆಂದು ನನಗೆ ತಿಳಿದುಬಂದಿದೆ ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳಾಗಲೀ, ಅಥವಾ ಮಾನ್ಯ ರಾಜ್ಯ ಸಚಿವರಾಗಲೀ ತಿಳಿಸಿದರೆ ಒಳ್ಳೆಯದೆಂದು ನಾನು ತಮ್ಮ ಮುಖಾಂತರ ಕೇಳುತ್ತಿದ್ದೇನೆ

ಶ್ರೀ ಎನ್ ಕುಮಾರ್ ಬಂಗಾರಪ್ಪ ಮಾನ್ಯ ಅಧ್ಯಕ್ಷರೆ, ವಿಶ್ವಬ್ಯಾಂಕಿನ ಯೋಜನೆ ವಿಚಾರದಲ್ಲಿ ನಾವು ಈಗಾಗಲೇ ಅಂತಿಮ ಹಂತಕ್ಕೆ ಬಂದಾಗಿದೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು, ನಮ್ಮ ಡೆವಲಪ್‌ಮೆಂಟ್ ಕಮೀಷನರ್ ಅವರೆಲ್ಲಾ ಫೆಬ್ರವರಿ ತಿಂಗಳಿನಲ್ಲಿ ಹೋಗಿಬಿಟ್ಟು ಅವರೊಂದಿಗೆ ಮಾತುಕತೆಯನ್ನು ಫೈನಲ್ ಆಗಿ ನಡೆಸತಕ್ಕಂಥ ಹಂತಕ್ಕೆ ನಾವು ಬಂದಿದ್ದೇವೆ ಈಗಾಗಲೇ ಫೈನಲ್ ಅಪ್ರೈಜಲ್ ಮಾಡಿಬಿಟ್ಟು ಫೈನಲ್ ಅಪ್ರೂವಲ್ ಹೊತ್ತಿಗೆ ಬೇಕಾಗಿರತಕ್ಕಂಥ ಮಾಹಿತಿಯನ್ನು ನಾವು ವಿಶ್ವಬ್ಯಾಂಕಿಗೆ ಈಗಾಗಲೇ ಒದಗಿಸಿ ಆಗಿದೆ ಮಾನ್ಯ ಸದಸ್ಯರು ಮಾತನಾಡುತ್ತಾ 1986ರಿಂದ ಇಲ್ಲಿಯವರೆಗೆ ಯಾವುದೇ ತರಹದ ಕೆಲಸಗಳನ್ನು ಮಾಡಿದ ಬಗ್ಗೆ ಮಾಹಿತಿಯನ್ನು ವಿಶ್ವಬ್ಯಾಂಕಿಗೆ ಕೊಟ್ಟಿಲ್ಲ ಎನ್ನತಕ್ಕಂಥ ವಾದವನ್ನು ಏನು ಹೇಳಿದ್ದಾರೆ ಆ ತರಹದ ಯಾವುದೇ ಒಂದು ತಪ್ಪು ತಿಳುವಳಿಕೆ ತಪ್ಪು ಗ್ರಹಿಕೆಯನ್ನು ವಿಶ್ವಬ್ಯಾಂಕಿನವರು ಮಾಡಿಲ್ಲ

ಹಾಗಾಗಿ ಯಾವುದೇ ತರಹದ ಸಮಸ್ಯೆಗಳು ಅಲ್ಲಿ ಉದ್ಭವಿಸುವುದಿಲ್ಲ

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ ಮಾನ್ಯ ಅಧ್ಯಕ್ಷರೆ, ಅವರು ಹೇಳಿರತಕ್ಕಂಥದ್ದರಲ್ಲಿ ಹುರುಳಿಲ್ಲ 1100 ಹೊಸ ಕೆರೆಗಳನ್ನು ಕಟ್ಟಬೇಕಾಗಿತ್ತು 120ರಲ್ಲಿ ಕೇವಲ 30 ಕೆರೆಗಳನ್ನು ಮಾತ್ರ ಕಟ್ಟ 90 ಕೆರಗಳನ್ನು ಕಟ್ಟಿಲ್ಲವೆನ್ನುವ ಮಾಹಿತಿ ಅವರಲ್ಲಿ ಇದೆ ಆದಕ್ಕಾಗಿ ತಮಗೆ ನಿಖರವಾಗಿ ಗೊತ್ತಿದ್ದರೆ ಹೇಳಿ ಇಲ್ಲದಿದ್ದರೆ ಇನ್ನೊಂದು ಸಲ ತಾವು ಎನ್‌ಕ್ವೈರಿ ಮಾಡಿ ಹೇಳಿದರೆ ಒಳ್ಳೆಯದು ಏಕೆಂದರೆ ವಿಶ್ವಬ್ಯಾಂಕ್‌ನವರು ಇನ್ನೊಂದು ಲೋಪದೋಷವನ್ನು ಎನು ಎತ್ತಿ ತೋರಿಸಿದ್ದಾರೆಂದರೆ 1986 ರಿಂದ 1991ರ ಅವಧಿಯಲ್ಲಿ ಎಲ್ಲಿ ನೀರು ನಿಲ್ಲುವುದಿಲ್ಲವೋ ಅಲ್ಲಿ ಕೆರೆಯನ್ನು ಕಟ್ಟಿದ್ದಾರೆಂದು ಹೇಳಿದ್ದಾರ ಅದರ ಬಗ್ಗೆ ತಮ್ಮಲ್ಲಿ ಏನಾದರೂ ಮಾಹಿತಿ ಇದ್ದರೆ ಕೊಡಿ, ಇಲ್ಲದಿದ್ದರೆ ಮುಂದಿನ ಸಭೆಯಲ್ಲಾದರೂ ಕೊಡಿ

ಶ್ರೀ ಕುಮಾರ್ ಬಂಗಾರಪ್ಪ ಮಾನ್ಯ ಅಧ್ಯಕ್ಷರೆ ಆ ತರಹದ ಯಾವುದೇ ಪ್ರಸ್ತಾವನೆ ಅಥವಾ ಮಾಹಿತಿ ನಮ್ಮ ಹತ್ತಿರ ಇಲ್ಲ ವಿಶ್ವಬ್ಯಾಂಕ್‌ನವರು ಯಾವುದೇ ಪ್ರಸ್ತಾವನೆಯನ್ನು ಆ ನಿಟ್ಟಿನಲ್ಲಿ ಮಾಡಿಲ್ಲ

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ ಮಾನ್ಯ ಅಧ್ಯಕ್ಷರೆ, ಹಾಗಾದರೆ 1986ರಲ್ಲಿ ತೆಗೆದುಕೊಂಡಂಥ ಹಣ ಪೂರ್ತಿ ಸದ್ವಿನಿಯೋಗವಾಗಿದೆಯೆಂದು ಮಾನ್ಯ ಸಚಿವರು ಒಪ್ಪಿಕೊಳ್ಳುತ್ತಾರೆಯೇ? ಅದನ್ನಾದರೂ ಒಪ್ಪಿಕೊಳ್ಳಲಿ ಆಗಿರುವಂಥ ಕೆರೆಗಳ ಸಂಪೂರ್ಣ ಮಾಹಿತಿಯನ್ನು ಸದನಕ್ಕೆ ಕೊಡಿಸುತ್ತೇನೆಂದು ಮಾನ್ಯ ಸಚಿವರು ಒಪ್ಪಿಕೊಂಡರೆ ಸಾಕು

ಶ್ರೀ ಎಸ್ ಕುಮಾರ್ ಬಂಗಾರಪ್ಪ ಮಾನ್ಯ ಅಧ್ಯಕ್ಷರೆ, ವಿಶ್ವಬ್ಯಾಂಕ್‌ನವರು ಕರ್ನಾಟಕಕ್ಕೆ ಬಂದಂಥ ಸಂದರ್ಭದಲ್ಲಿ ಅವರ ಹಳೆಯ ಎಲ್ಲಾ ಪ್ರಾಜೆಕ್ಟ್‌ಗಳನ್ನು ಅವರೇ ಸ್ವತಃ ಹೋಗಿ ಇನ್‌ಸ್ಪೆಕ್ಟ್ ಮಾಡಿರತಕ್ಕಂಥ ನಿದರ್ಶನಗಳೂ ಸಹ ಇವೆ ಹಾಗಾಗಿ ಯಾವ ಯಾವ ಪ್ರಾಜೆಕ್ಟ್‌ನಲ್ಲಿ ಸಣ್ಣಪುಟ್ಟ ಲೋಪದೋಷಗಳು ಇವೆ ಎನ್ನತಕ್ಕಂಥದ್ದನ್ನು ಮಾನ್ಯ ಶಾಸಕರು ಹೇಳುತ್ತಿದ್ದಾರೆ ಅದನ್ನು ಬೇಕಾದರೆ ಇನ್ನೊಂದು ಸಾರಿ ವೆರಿಫೈ ಮಾಡಿ ಹೇಳುತ್ತೇನೆ

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಜಲಸಂವರ್ಧನೆ ಯೋಜನೆಯನ್ನು ಅನುಷ್ಠಾನ ಮಾಡುತ್ತೇವೆಂದು ಕಳೆದ ಒಂದೂವರೆ ವರ್ಷದಿಂದ ರಾಜ್ಯಸರ್ಕಾರ ಪ್ರಚಾರ ಮಾಡುತ್ತಿದೆ ಆದರೆ ಇಲ್ಲಿಯವರೆಗೆ ಯಾವುದೇ ಕೆಲಸ ಆಗಿಲ್ಲ ಶ್ರೀ ಶಿವಾನಂದ ಪಾಟೀಲರು ಕೆಲವೊಂದು ಪ್ರಶ್ನೆಗಳನ್ನು ಕೇಳಿದರೂ ಸಹ ಅದಕ್ಕೆ ಸ್ಪಷ್ಟವಾದಂಥ ಉತ್ತರಗಳನ್ನು ಮಾನ್ಯ ಮಂತ್ರಿಗಳು ಕೊಟ್ಟಿಲ್ಲ ಮಾನ್ಯ

ಮುಖ್ಯಮಂತ್ರಿಯವರು ಮತ್ತು ಮಾನ್ಯ ಸಣ್ಣ ನೀರಾವರಿ ಸಚಿವರು ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗಕ್ಕೆ ಹೋಗಿ ಕೆರೆಯ ಹೂಳನ್ನು ತೆಗೆಯುವ ನಲುವಾಗಿ ದೊಡ್ಡ ಪ್ರಮಾಣದಲ್ಲಿ ಪ್ರಚಾರ ಮಾಡಿ ನವಳಂಗ ಕೆರೆಯ ಹೂಳನ್ನು ತೆಗೆಯುವಂಥ ಕಾರ್ಯಕ್ರಮವನ್ನು ಮಾಡಿ ಬಂದರು ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಂಬಂಧಪಟ್ಟ ಮಂತ್ರಿಗಳು ಅಲ್ಲಿಂದ ಬಂದ ಮೇಲೆ ಒಂದಿಷ್ಟು ಸಹ ಕೆಲಸ ಪ್ರಾರಂಭವಾಗಿಲ್ಲ ಅಂದರೆ ಮಾನ್ಯ ಮುಖ್ಯಮಂತ್ರಿಗಳು ಹೋಗಿ ಎಲ್ಲಿ ಹೂಳು ಎತ್ತುವುದಕ್ಕೆ ಶಂಕುಸ್ಥಾಪನೆ ಮಾಡಿ ಬಂದರು ಆ ಕೆರೆ ಹೂಳು ತೆಗೆಯುವಂಥ ಕೆಲಸ ಪ್ರಾರಂಭವಾಗಿಲ್ಲ ಹಾಗೆಯೇ ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ಈ ಪ್ರಾಜೆಕ್ಟ್‌ನ ಮೂಲಕ ಕೆಲವು ಕೆರೆಗಳನ್ನು ಏನು ಸೆಲೆಕ್ಟ್ ಮಾಡಿದ್ದಾರೆ ಅಲ್ಲಿ ಇಲ್ಲಿಯವರೆಗೂ ಏನೂ ಕೆಲಸ ಪ್ರಾರಂಭವಾಗಿಲ್ಲ ಹಾಗಾದರೆ ವಿಶ್ವಬ್ಯಾಂಕಿನಿಂದಾಗಲೀ ಅಥವಾ ಬೇರೆ ಕಡೆಯಿಂದ ಹಣ ಮಂಜೂರು ಆಗದೇ ಇದ್ದಂಥ ಸಂದರ್ಭದಲ್ಲಿ ನೀವು ಈ ರೀತಿ ಪ್ರಚಾರ ಮಾಡಿಕೊಂಡು ಜನರನ್ನು ಮರುಳು ಮಾಡುವಂಥ ಕೆಲಸವನ್ನು ಏಕೆ ಮಾಡುತ್ತಿದ್ದೀರಿ? ನಿಮಗ ನಿಜವಾಗಿಯೂ ಕೆರೆಗಳ ಹೂಳು ಎತ್ತಿ ಜಲಸಂವರ್ಧನೆ ಮಾಡುವುದರಲ್ಲಿ ಕಳಕಳಿ ಇದ್ದರೆ ಹಣ ಮಂಜೂರು ಆದ ಮೇಲೆ ನೀವು ಕೆಲಸವನ್ನು ಪ್ರಾರಂಭ ಮಾಡಿ ಅದು ಬಿಟ್ಟು ಕೇವಲ ಒಣಪ್ರಚಾರ ಮಾಡುವಂಥದ್ದು ಆಗಬಾರದೆಂದು ನನ್ನ ನಲಹೆ ಶಂಕುಸ್ಥಾಪನೆ ಮಾಡಿ ಬಂದಿದ್ದೀರಿ, ಅಲ್ಲಿ ಏನು ಕೆಲಸವಾಗಿದೆ ಎಂಬುದನ್ನು ದಯವಿಟ್ಟು ಹೇಳಬೇಕು ನಿಮ್ಮ ಲಿಖಿತ ಉತ್ತರದಲ್ಲಿ 'ಇನ್ನೂ ಜಾರಿಗೊಳಿಸಿರುವುದಿಲ್ಲ, 'ಉದ್ಘಾಸಿಸುವುದಿಲ್ಲ' ಎಂದು ಹೇಳಿದ್ದೀರಿ ಅಂದರೆ ಇನ್ನೂ ಏನೂ ಪ್ರಾರಂಭ ಮಾಡಿಯೇ ಇಲ್ಲ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಮಂಜೂರಾದ ಅನುದಾನ ಎಷ್ಟು ಎಂದು ಕೇಳಿದ್ದಕ್ಕೆ ಉದ್ಘಾಸಿಸುವುದಿಲ್ಲ ಎಂದು ಹೇಳಿದ್ದೀರಿ ಅಂದರೆ ಹಣವೇ ಮಂಜೂರಾಗಿಲ್ಲ ರಾಜ್ಯದಲ್ಲಿ ಜಲಸಂವರ್ಧನೆ ಯೋಜನೆಯನ್ನು ಜಾರಿಗೊಳಿಸಲಾಗಿದೆಯೇ ಎಂದು ಕೇಳಿದ್ದಕ್ಕೆ ಇನ್ನೂ ಜಾರಿಗೊಳಿಸಿರುವುದಿಲ್ಲ ಎಂದಿದ್ದೀರಿ ಹಾಗಾದರೆ ನೀವು ಶಂಕುಸ್ಥಾಪನೆ ಮಾಡಿ ಏಕೆ ಈ ಕಡೆಗೆ ಬಂದಿರಿ?

ಶ್ರೀ ಎಸ್ ಎಂ ಕೃಷ್ಣ(ಮುಖ್ಯಮಂತ್ರಿಗಳು) ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರ ಎರಡು ವಿಚಾರಗಳನ್ನು ಪ್ರತ್ಯೇಕವಾಗಿ ಯೋಚನೆ ಮಾಡುತ್ತಿದೆ ಒಂದು, ರಾಜ್ಯಸರ್ಕಾರ ಹಮ್ಮಿಕೊಂಡಿರತಕ್ಕಂಥ ರೈತ ಕಾಯಕ ಕೆರೆ ಪುನರ್ ನಿರ್ಮಾಣ ಇದು ರಾಜ್ಯಸರ್ಕಾರ ಸೀಮಿತವಾಗಿ 745 ಹೋಬಳಿಗಳಲ್ಲಿ ಈ ಕೆರೆ ಹೂಳನ್ನು ತೆಗೆಯತಕ್ಕಂಥದ್ದು, ಈ ಕೆರೆಗಳನ್ನು ಬಂದೋಬಸ್ತ್ ಮಾಡತಕ್ಕಂಥದ್ದು ದುರಸ್ತಿ ಮಾಡತಕ್ಕಂಥದ್ದು ಒಂದು ಕಾರ್ಯಕ್ರಮವಾಗಿದೆ ಇನ್ನೊಂದು ಕಾರ್ಯಕ್ರಮ ವಿಶ್ವಬ್ಯಾಂಕಿನ ಜೊತೆಯಲ್ಲಿ ನಾವು ಸಂಧಾನ ಮಾಡುತ್ತಿರತಕ್ಕಂಥದ್ದು ವಿಶ್ವಬ್ಯಾಂಕಿನ ಜೊತೆಯಲ್ಲಿ ಸಂಧಾನ ಮಾಡತಕ್ಕಂಥದ್ದು ಕೇವಲ 6-8 ತಿಂಗಳ ಪ್ರಕ್ರಿಯೆ ಆಗಿದ್ದಿದ್ದರೆ ಇಷ್ಟು ಹೊತ್ತಿಗೆ ಆಗಲೇ

ಅವರು ಸ್ಯಾಂಕ್ಷನ್ ಕೂಡಬಹುದಾಗಿತ್ತು ಆದರೆ ಅದು ಬಹಳಮಟ್ಟಿಗೆ ಅಪ್ರೈಜಲ್ ರಿ-ಅಪ್ರೈಜಲ್ ಸ್ಕೀಂಗಳೆಲ್ಲಾ ಬಂದು ಸಾಕಾದಮ್ಟ ಗ್ಯಾರಂಟೀನ್ ಸಿಕ್ಕಿ ನಮಾಧಾನ ಆಗಿ ನಮ್ಮಲ್ಲಿ ವಿಶ್ವಾಸ ಹುಟ್ಟಿ ಆ ನಂತರ ಅವರು ಈ ಹಣವನ್ನು, ಲೋನನ್ನು ಮತ್ತು ಗ್ರಾಂಟ್‌ನ್ನು ಸ್ಯಾಂಕ್ಷನ್ ಮಾಡಿಕೊಳ್ಳಬೇಕಾಗಿರತಕ್ಕಂಥದ್ದು ಅದಕ್ಕೆ ಮಾನ್ಯ ಸಚಿವರು ಹೇಳಿದ ಹಾಗೆ ನಮ್ಮ ಸ್ಕೀಂನಿಂದ ಫಿಬ್ರವರಿ ಕೊನೆಯಲ್ಲಿ ವಾಷಿಂಗ್‌ಟನ್‌ಗೆ ಹೋಗುತ್ತಿದೆ ವಾಷಿಂಗ್‌ಟನ್‌ಗೆ ಹೋದಾಗ ನಾವು ಯಶಸ್ವಿಯಾಗಿ ಉತ್ತರ ಕರ್ನಾಟಕದ ಭಾಗಗಳಲ್ಲಿ ಈ ಕೆರ ಹೂಳು ಎತ್ತಬೇಕ್ಕಂಥ ಒಂದು ದೊಡ್ಡ ಕಾರ್ಯಕ್ರಮಕ್ಕೆ ಸುಮಾರು 700 ಕೋಟಿ ರೂಪಾಯಿಗಳು ನಮಗೆ ಸಿಕ್ಕುತ್ತದೆ ಮಾರ್ಚ್-ಏಪ್ರಿಲ್ ತಿಂಗಳಿನಲ್ಲಿ ನಾವು ಈ ಕಾರ್ಯವನ್ನು ಪ್ರಾರಂಭ ಮಾಡಲಿಕ್ಕೆ ಏನು ಎಲ್ಲಾ ಪೂರಕವಾದಂಥ ಕೆಲಸಕಾರ್ಯಗಳನ್ನು ಹಮ್ಮಿಕೊಳ್ಳಬೇಕೋ ಆ ಕಾರ್ಯಕ್ರಮಗಳನ್ನು ನಾವು ಹಮ್ಮಿಕೊಂಡಿದ್ದೇವೆ

ಶ್ರೀ ಜಗದೀಶ ಶೆಟ್ಟರ್ ಮಾನ್ಯ ಅಧ್ಯಕ್ಷರೆ, ಈ ರೈತ ಕಾಯಕ ಕೆರೆ ಯೋಜನೆ ಬಗ್ಗೆ ಹೇಳಿದರು ಇದು ಒಂದಕ್ಕೊಂದು ತೊಳಲಿಕೆ ಇರುವಂಥದ್ದು ಈ ರೈತ ಕಾಯಕ ಕೆರೆ ಯೋಜನೆಗೂ ಸಹ ಒಂದು ಪೈಸೆ ಕೂಡ ಬಿಡುಗಡೆ ಮಾಡಿಲ್ಲ ಆದ್ದರಿಂದ ಒಂದು ಪೈಸೆ ಸಹ ಬಿಡುಗಡೆ ಮಾಡದಿದ್ದರೂ ಕೂಡ ಸುಮ್ಮನೆ ಪ್ರಚಾರ ಏಕೆ ಮಾಡುತ್ತಿದ್ದೀರಿ ಎಂದು ಕೇಳುತ್ತಿದ್ದೇನೆ ನಿಜವಾಗಿ ಕೆಲಸ ಮಾಡಿ ಎಂದು ನಾವು ಕಳಕಳಿಯಿಂದ ಹೇಳುತ್ತಿದ್ದೇವೆ

ಶ್ರೀ ಕುಮಾರ್ ಬಂಗಾರಪ್ಪ ಮಾನ್ಯ ಅಧ್ಯಕ್ಷರೆ, ಎರಡೂ ಕಾರ್ಯಕ್ರಮಗಳನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಸ್ವಲ್ಪ ತಪ್ಪಾಗಿ ತಿಳಿದುಕೊಂಡಿದ್ದಾರೆ ಏನೋ ಎಂಬುದು ನನ್ನ ಭಾವನೆ ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ರೈತ ಕಾಯಕ ಕೆರೆ ಕಾರ್ಯಕ್ರಮ ಮತ್ತು ಜಲಸಂವರ್ಧನೆ ಇವೆರಡೂ ವಿಬಿನ್ನವಾಗಿರತಕ್ಕಂಥ ಕಾರ್ಯಕ್ರಮ ನಮಗೆ ರೈತ ಕಾಯಕ ಕೆರೆ ಕಾರ್ಯಕ್ರಮಕ್ಕೆ ಬೇಕಾಗಿರತಕ್ಕಂಥ ಹಣವನ್ನು ನಾವು ಕ್ರೋಢೀಕರಿಸಿಕೊಂಡಿದ್ದೇವೆ ಅಲ್ಲಿ ಬೇಕಾಗಿರತಕ್ಕಂಥ ಎನ್ ಜಿ ಒ ಗಳು ಮತ್ತು ಅಲ್ಲಿ ನಮ್ಮ ನೀರು ಬಳಕೆದಾರರ ಸಂಘವನ್ನು ಸ್ಥಾಪನೆ ಮಾಡಿಕೊಂಡು ಕೆಲಸ ಮಾಡುವುದಕ್ಕೆ, ಈಗಾಗಲೇ ಆ ಪ್ರಕ್ರಿಯೆಯಲ್ಲಿ ನಾವು ಇದ್ದೇವೆ ಅದಷ್ಟು ಬೇಗ ನಾವು ಫೀಲ್ಡ್‌ವರ್ಕ್‌ಗೆ ಹೋಗಿಬಿಟ್ಟು ಹೂಳು ತೆಗೆಯುವಂಥ ಕೆಲಸವನ್ನು ಏಕೆಂದರೆ

ಶ್ರೀ ಜಗದೀಶ್ ಶೆಟ್ಟರ್ ಹಣ ಎಷ್ಟು ಬಿಡುಗಡೆ ಮಾಡಿದಿರಿ? ನೀವು ಏನು ಉದ್ಘಾಟನೆ ಮಾಡಿ ಬಂದಿದ್ದೀರಿ ಅಲ್ಲಿ ಕೆಲಸ ನಡೆಯುತ್ತಿದೆಯೇ?

ಶ್ರೀ ಎಸ್ ಕುಮಾರ್ ಬಂಗಾರಪ್ಪ ದಯವಿಟ್ಟು ಕೇಳಿ, ಈಗ ಕೆಲಸ ಪ್ರಾರಂಭ ಮಾಡಬೇಕಾದರೂ ನೀರು ಬಳಕೆದಾರರ ಸಂಘ ಆಗಬೇಕು ಇಲ್ಲಿಯವರೆಗೂ ಕೂಡ

ಈ ತರಹದ ವ್ಯವಸ್ಥೆಯಲ್ಲಿ ಕಾರ್ಯಕ್ರಮ ಮಾಡಿರಲಿಲ್ಲ ಹಾಗಾಗಿ ರೈತರ ಮುಖಂಡತ್ವದಲ್ಲಿ ಕಾರ್ಯಕ್ರಮವನ್ನು ಮಾಡಬೇಕೆನ್ನುವುದಾದರೆ ರೈತರನ್ನೆಲ್ಲರನ್ನೂ ಒಂದು ಕಡೆ ಸೇರಿಸಿಬಿಟ್ಟು ಅವರಿಗೆ ಏನೇನು ಕಾರ್ಯಕ್ರಮ ಯಾವ ರೀತಿ ಮಾಡಿಕೊಂಡು ಹೋಗಬೇಕೆನ್ನುವುದನ್ನೇ ನಾವು ತಿಳಿಸಲಿಲ್ಲವೆಂದರೆ, ನೀವು ಕಾರ್ಯಕ್ರಮವನ್ನು ಹೋಗಿ ಅನುಷ್ಠಾನ ಮಾಡಿದರೆ ನಾಳೆಯ ದಿವಸ ಎಲ್ಲವೂ ಕೂಡ ಹಿಂದೆ ಏನಾಗಿತ್ತೋ ಅದೇ ರೀತಿ ಮತ್ತೆ ಆಗುತ್ತದೆ ಎನ್ನತಕ್ಕಂಥ ಉದ್ದೇಶದಿಂದಲೇ ನಮ್ಮ ಕರ್ನಾಟಕ ನೀರಾವರಿ ನಿಗಮದಿಂದ ಬೇಕಾಗಿರತಕ್ಕಂಥ 20 ಕೋಟಿ ರೂಪಾಯಿಗಳನ್ನು ಈ ಕಡೆಗೆ ತೆಗೆದುಕೊಂಡಿದ್ದೇವೆ ನಮ್ಮದೇ ಆಗಿರತಕ್ಕಂಥ 10 ಕೋಟಿ ರೂಪಾಯಿಗಳನ್ನು ನಮಗೆ ಬೇಕಾಗಿರತಕ್ಕಂಥದ್ದಕ್ಕೆ ತೆಗೆದುಕೊಂಡಿದ್ದೇವೆ ಮೊದಲನೇ ಹಂತದಲ್ಲಿ 745 ಹೋಬಳಿಗಳಲ್ಲಿ ಮಾನ್ಯ ಶಾಸಕರ ಅಧ್ಯತೆ ಮೇರೆಗೆ ಏನು ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ ಅದನ್ನು ಸಂಪೂರ್ಣವಾಗಿ ನಾವು ಅನುಷ್ಠಾನಕ್ಕೆ ತರತಕ್ಕಂಥ ನಿಟ್ಟಿನಲ್ಲಿ ಈಗಾಗಲೇ ಸಾಗಿದ್ದೇವೆ

ಶ್ರೀ ಸಿ ಬೈರೇಗೌಡ ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ನೀಡಿರತಕ್ಕಂಥ ಉತ್ತರವನ್ನು ಮೇಲಿನಿಂದ ಕೆಳಗಿನವರೆಗೆ ನಾಲ್ಕು ಸಾರಿ ಓದಿದ್ದೀನಿ ಹೊಟ್ಟೆಗ ಬಂಕಿ ಬೀಳತಕ್ಕಂಥ ಉತ್ತರವನ್ನು ಸರ್ಕಾರ ಹೇಳಿದೆ ಇದು ಬಹಳ ಮುಖ್ಯವಾದಂಥ ಕಾರ್ಯಕ್ರಮವಾಗಿದೆ ಕುಡಿಯುವುದಕ್ಕೆ ನೀರು ಇಲ್ಲದ ಹಾಗೆ ಆಗುತ್ತದೆ, ದನಕರುಗಳಿಗೆ ಕೂಡ ಕುಡಿಯುವುದಕ್ಕೆ ನೀರು ಸಿಗುವುದಿಲ್ಲ ಇಂಥ ಪರಿಸ್ಥಿತಿಯನ್ನು ಇವತ್ತಿನ ದಿವಸ ರಾಜ್ಯದ ಎಲ್ಲಾ ಭಾಗದಲ್ಲೂ ಜನರು ಅನುಭವಿಸುತ್ತಿದ್ದಾರೆ ಈ ಕಾರ್ಯಕ್ರಮದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಭಾಷಣದಲ್ಲಿ ಹೇಳಿದ್ದೇ ಹೇಳಿದ್ದು ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಕೂಡ ಕೆರೆಗಳ ಹೂಳೆತ್ತುವ ಬಗ್ಗೆ ಹೇಳುತ್ತಲೇ ಇದ್ದೇವೆ ಆದರೆ ಇಲ್ಲಿಯವರೆಗೂ ಕೂಡ ಒಂದು ಕೆರೆಯಲ್ಲಿ ಸಹ ಹೂಳು ಎತ್ತತಕ್ಕಂಥ ಕೆಲಸವನ್ನು ಪ್ರಾರಂಭ ಮಾಡಿಲ್ಲ ಹೂಳು ಎತ್ತುವುದಕ್ಕೆ ಹಣವನ್ನು ಬಿಡುಗಡೆ ಮಾಡಿದ್ದೀರಾ ಎಂದು ಸರ್ಕಾರವನ್ನು ಕೇಳಿದರೆ ಇಲ್ಲ ಎಂದು ಹೇಳುತ್ತಿದ್ದಾರೆ ಕಾರ್ಯಕ್ರಮಕ್ಕೆ ಅಸ್ತಿಭಾರ ಹಾಕಿ ಬಂದ ಮೇಲೆ ಅಲ್ಲಿ ಕೆಲಸ ಪ್ರಾರಂಭವಾಗುವುದೇ ಇಲ್ಲ ಎಂದು ಮಾನ್ಯ ಶೆಟ್ಟರ್ ಅವರೂ ಕೂಡ ಹೇಳುತ್ತಿದ್ದಾರೆ ಇಂಥ ಮುಖ್ಯವಾದಂಥ ಕಾರ್ಯಕ್ರಮಕ್ಕೆ ಇಷ್ಟೊಂದು ಅನಾದಾರಣೆಯನ್ನು ಸರ್ಕಾರ ಏಕೆ ತೋರಿಸುತ್ತಿದೆ? ನನಗೂ ಕೂಡ ಆತ್ಮಗೌರವ ಎಲ್ಲರಂತೆ ಇದೆ ಆದರೂ ಕೂಡ ಆತ್ಮಗೌರವ ಬಿಟ್ಟು ಮಾನ್ಯ ಮುಖ್ಯಮಂತ್ರಿಗಳಿಗೆ 3-4 ಸಾರಿ ನಾನು ಹೇಳಿದ್ದೇನೆ ಇದರ ಬಗ್ಗೆ ಕೆಲವು ಸಮಸ್ಯೆಗಳು ಇದ್ದವು, ಅವೆಲ್ಲವನ್ನೂ ಮಾಡಿ ನೋಡಿರತಕ್ಕಂಥ ಅನುಭವ ಇದೆ ಆದ್ದರಿಂದ ಒಂದು ಸಭೆ ಕರೆಯಿರಿ ಎಂದು ನಾನು ಸದನದಲ್ಲಿ ಮತ್ತು ಸದನದ ಹೊರಗಡೆಯೂ ಹೇಳಿದ್ದೇನೆ ನಾವು ಹೇಳಿರುವುದು ಮುಖ್ಯಮಂತ್ರಿಗಳ ಕಿವಿ ಮೇಲೆ ಬೀಳಲಿಲ್ಲ ಬಿಲ್ ಕ್ಲಿಂಟನ್ ಅದವಾ ಇಂಗ್ಲೆಂಡಿನ

ಪ್ರಧಾನಿ ಬಂದು ಇವರಿಗೆ ಹೇಳಬೇಕೋ ಅಥವಾ ಬೆಂಗಳೂರಿನಲ್ಲಿರುವ ಇನ್ಯಾರೋ ಬಂದು ಇವರಿಗೆ ಹೇಳಬೇಕೋ ಗೊತ್ತಿಲ್ಲ ನಮ್ಮಂಥವರು ಭೂಮಿಯಿಂದ ಬಂದಿರುವವರು ಕೆಲಸ ಮಾಡಿ ನೋದಿರುವವರು, ಇದರ ಅವಶ್ಯಕತೆ ಏನಿದೆ ಎಂದು ಅರಿತುಕೊಂಡಿರುವವರು ಹೇಳಿರುವ ಮಾತು ಇವರಿಗೆ ಬೇಕಾಗಿಲ್ಲ ಹೋಗಲಿ ಕಾರ್ಯಕ್ರಮವನ್ನಾದರೂ ಜಾರಿ ಮಾಡಿದ್ದಾರೆಯೇ ಎಂದರೆ ಅದೂ ಕೂಡ ಇಲ್ಲ ಕೇವಲ ಮಾತಿನಲ್ಲಿ ಮಾಯಾಜಾಲವನ್ನು ಸೃಷ್ಟಿಸುವ ಕೆಲಸ ಈ ಸರ್ಕಾರದಲ್ಲಾಗುತ್ತಿದೆ ಇದನ್ನು ಜಾರಿ ಮಾಡುತ್ತೀರೋ ಇಲ್ಲವೋ ಎಂಬುದನ್ನು ನಿರ್ದಿಷ್ಟವಾಗಿ ಹೇಳಿ ಇದು ಅತೀ ಮುಖ್ಯವಾದ ಕಾರ್ಯಕ್ರಮ ಈ ಕಾರ್ಯಕ್ರಮವನ್ನು ಕಳೆದ ಎರಡೂಕಾಲು ವರ್ಷಗಳಿಂದ ಅನಾದರಣೆ ಮಾಡಿದ್ದೀರಿ ಹೆಚ್ಚಿನ ಹಣ ಖರ್ಚಿಲ್ಲದೆ ಬಡ್ಜೆಟ್ಟಿನಲ್ಲಿರುವ ಹಣದಿಂದಲೇ ಒಂದಕ್ಕೆ ನೂರರಷ್ಟು ಕೆಲಸ ಮಾಡುವ ಸಾಧ್ಯತೆ ಇದೆ ಇದನ್ನು ಯಾವಾಗ ಮಾಡುತ್ತೀರಿ?

ಅಧ್ಯಕ್ಷರು ಸಪ್ಲಿಮೆಂಟರಿ ಪ್ರಶ್ನೆ ಕೇಳಿ ರಾಜ್ಯಪಾಲರ ಭಾಷಣದ ಸಂದರ್ಭದಲ್ಲಿ ಉಳಿದ ವಿಷಯಗಳನ್ನು ಮಾತನಾಡಿ

ಶ್ರೀ ಶಿವಾನಂದ ಪಾಟೀಲ್ ಎಸ್ ಇದನ್ನು ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳಿ

ಅಧ್ಯಕ್ಷರು ತೆಗೆದುಕೊಳ್ಳೋಣ ಆ ಬಗ್ಗೆ ಬರೆದು ಕಳುಹಿಸಿ

ಶ್ರೀ ಎಸ್ ಎಂ ಕೃಷ್ಣ ವಿಶ್ವಬ್ಯಾಂಕ್ ಸಾಲ ಬೇಕಂದು ಹೇಳಿದರೆ ಅದಕ್ಕೆ ಎಲ್ಲರ ಶಿಫಾರಸ್ಸು ಅಗತ್ಯವಿದೆ ಮಾನ್ಯ ಸದಸ್ಯರು ಆಗಲೇ ಯಾರ ಹಸರುಗಳನ್ನು ಮೆನ್‌ಷನ್ ಮಾಡಿದರೋ ಅವರ ಸಹಾನುಭೂತಿ ಒಹಳ ಅವಶ್ಯಕ ಇದೆ ವಿಶ್ವ ಬ್ಯಾಂಕ್ ಅಧ್ಯಕ್ಷರ ಸಹಾನುಭೂತಿಯೂ ಬಹಳ ಅವಶ್ಯಕವಾಗಿದೆ ಕೆರೆ ಹೂಳು ತೆಗೆಯುವ ಕಾರ್ಯಕ್ರಮದ ಬಗ್ಗೆ ಮಾನ್ಯ ಸದಸ್ಯರು ನನಗೆ ಆಗಿಂದಾಗ್ಗೆ ಹೇಳುತ್ತಾರೆ ಈ ಕಾರ್ಯಕ್ರಮದ ಪ್ರಾಮುಖ್ಯತೆಯನ್ನು ಅರಿತುಕೊಂಡೇ ಕಳದ ಎರಡೂಕಾಲು ವರ್ಷಗಳಲ್ಲಿ ಒಂದು ವ್ಯವಸ್ಥಿತವಾದ ಯೋಗ್ಯವಾದ ಕಾರ್ಯಕ್ರಮವನ್ನು ನಾವು ಹಮ್ಮಿಕೊಂಡಿದ್ದೇವೆನ್ನುವ ಬಗ್ಗೆ ನಮಗೆ ಸಾಕಷ್ಟು ವಿಶ್ವಾಸವಿದೆ ಅದನ್ನೇ ಉತ್ತರದಲ್ಲಿಯೂ ಹೇಳಿರುವುದು ಜಲ ಸಂವರ್ಧನೆ ಕಾರ್ಯಕ್ರಮಕ್ಕೆ ವಿಶ್ವಬ್ಯಾಂಕ್‌ನವರು ಹಣ ಕೊಡಬೇಕು ಅದಕ್ಕೆ ಫೆಬ್ರವರಿಗೆ ಹೋಗುತ್ತಾರೆ ಮಾರ್ಚ್ ತಿಂಗಳಲ್ಲಿ ನಮ್ಮ ಯೋಜನೆಗೆ ಅನುಮೋದನೆ ಸಿಗುತ್ತದೆ ಏಪ್ರಿಲ್ ತಿಂಗಳಲ್ಲಿ ಈ ಕೆಲಸವನ್ನು ಚಾಲೂ ಮಾಡಲು ಬೇಕಾದ ಪೂರಕವಾದ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದ್ದೇವೆ ಎರಡನೆಯದಾಗಿ ರಾಜ್ಯ ಸರ್ಕಾರದ ಸಂಪನ್ಮೂಲಗಳಿಂದ ರೈತ ಕಾಯಕ ಕೆರೆಗಳ ಕೆಲಸವನ್ನು ಪ್ರಾರಂಭಿಸಿದ್ದೇವೆ ಏನು ಕೆಲವೊಂದು ಕದ ಪ್ರಾರಂಭಿಸಿದ್ದೇವೆ, ಅಲ್ಲಿ

ನಾನ್-ಗೌರ್ನಮೆಂಟಲ್ ಆರ್ಗನೈಜೇಷನ್ ಮತ್ತು ನೀರು ಬಳಕೆದಾರರ ಸಂಘಗಳು ಆಗಬೇಕೆಂದು ಮಾನ್ಯ ಸಚಿವರೇನು ಹೇಳಿದ್ದಾರೆ ಆ ಸಂಘಗಳನ್ನು ಬಹಳ ಬೇಗ ರಚಿಸಿ, ಅದರ ಮೂಲಕ ಮಾಡಬೇಕಾಗಿದೆ ಈ ಸರ್ಕಾರ ಯಾವುದರಲ್ಲಿ ನಂಬಿಕೆ ಇಟ್ಟಿದೆ ಎಂದರೆ, ಪಬ್ಲಿಕ್ ಮತ್ತು ಪ್ರೈವೇಟ್ ಪಾರ್ಟಿಸಿಪೇಷನ್ ಗ್ರಾಮಸ್ಥರ ಪಾರ್ಟಿಸಿಪೇಷನ್ ಇಲ್ಲವಿದ್ದರೆ ಯಾವ ಕೆಲಸವೂ ಆಗುವುದಿಲ್ಲ ಆ ಪಾರ್ಟಿಸಿಪೇಟರಿ ಅಪ್ರೋಚ್‌ಗೆ ಈ ಸರ್ಕಾರ ಬದ್ಧವಾಗಿದ ಆ ದಿಕ್ಕಿನಲ್ಲಿ ನಾವು ಕೆಲಸವನ್ನು ಸಾಧಿಸುತ್ತಿದ್ದೇವೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೇಂದಿ ಮೇಲಿನ ಲೀಟರ್ ಫೀಯನ್ನು ರದ್ದು ಗೊಳಿಸುವುದು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ , 9(45)

**ಸದಸ್ಯರ ಹೆಸರು ಶ್ರೀ ಅಭಯಚಂದ್ರ ಕೆ(ಮೂಡಬಿದ್ರೆ)**

**ಉತ್ತರಿಸುವ ಸಚಿವರು ಶ್ರೀ ಎಂ ಎಂ ನಾಣಯ್ಯ (ಅಬಕಾರಿ ರಾಜ್ಯ ಸಚಿವರು)**

## ಪ್ರಶ್ನೆ

ಅ ದಕ್ಷಿಣ ಕನ್ನಡದಲ್ಲಿ ಎಷ್ಟು ಮೂರ್ತೆದಾರರ ಸಹಕಾರ ಸಂಘಗಳಿವೆ ಸೇಂದಿ ಮೇಲಿನ ಲೀಟರ್ ಫೀ ಬಾಕಿ ಇದೆ ಎಂದು ಈ ಸೊಸೈಟಿಗಳಿಗೆ ಸೇಂದಿ ಅಂಗಡಿಗಳ ಲೈಸೆನ್ಸ್ ಕೊಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ ಬಾಕಿ ಇರುವ ಲೀಟರ್ ಫೀಯನ್ನು ಹಿಂದಿನ ಸರ್ಕಾರ ರದ್ದುಪಡಿಸಿರುವುದು ನಿಜವೇ?

ಇ ಇಲ್ಲದಿದ್ದಲ್ಲಿ ಈ ಲೀಟರ್ ಫೀಯನ್ನು ರದ್ದುಗೊಳಿಸಲಾಗುವುದೇ?

ಈ ಹಾಗಿದ್ದಲ್ಲಿ ಇದನ್ನು ಎಂದಿನಿಂದ ಜಾರಿಗೊಳಿಸಲಾಗುವುದು?

## ಉತ್ತರ

ಅ ದಕ್ಷಿಣ ಕನ್ನಡದಲ್ಲಿ 36 ನೋಂದಾಯಿತ ಮೂರ್ತೇದಾರರ ಸಹಕಾರಿ ಸಂಘಗಳಿರುತ್ತದೆ

ಹೌದು